**ಪ್ರಧಾನ ಸಿವಿಲ್?ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

ಸಿ.ಸಿ.5456/2021

| | | | |
|---|---|---|---|
| ಸಾಕ್ಷಿದಾರರ ಹೆಸರು | - ಶಿವರಾಮು | | ಚಾ ಸಾ -3 |
| ತಂದೆಯ ಹೆಸರು | - ಶಂಕರೇಗೌಡ | | ಪ್ರಾ ಸಾ -2 |
| ವಯಸ್ಸು | - 45 ವರ್ಷ | | |
| ಉದ್ಯೋಗ | - ಸರ್ವೆಯರ್ | | |
| ವಾಸ ಸ್ಥಳ | - ದೇವನಹಳ್ಳಿ | | |

ದಿನಾಂಕಃ 18.10.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:</u>**

ಚಾಸಾ-1 ನನ್ನ ಅಕ್ಕ, ಚಾಸಾ-2 ರವರು ಚಾಸಾ-1 ರವರ ಪಕ್ಕದ ಮನೆಯವರು. ಆರೋಪಿತರ ಪರಿಚಯವಿರುತ್ತದೆ.

ದಿ.05.04.2021 ರಂದು ನಾನು ಕರ್ತವ್ಯದಲ್ಲಿದ್ದೇನು. ಸಂಜೆ 6.30-7.00 ಗಂಟೆಗೆ ಚಾಸಾ-1 ರವರು ನನಗೆ ಕರೆ ಮಾಡಿ ಮನೆಗೆ ಗೆದ್ದಲಿ ಹತ್ತಿಕೊಂಡಿದ್ದು ಅದಕ್ಕೆ ಚಾಸಾ-1 ರವರು ನೀರು ಹಾಕಿ ಸ್ವಚ್ಛ ಗೊಳಿಸುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ಅವರಿಗೆ ಹೊಡೆದಿರುವುದಾಗಿ ತಿಳಿಸಿರುತ್ತಾರೆ.

ನನಗೆ ಕರೆ ಮಾಡಿದ ನಂತರವು ಸಹ ಆರೋಪಿತರು ಹೊಡೆದು ರಕ್ತ ಬಂದಿರುವುದಾಗಿ ತಿಳಿಸಿರುತ್ತಾರೆ. 1 ನೇ ಆರೋಪಿ ಚಾಸಾ-1 ರವರ ಮಂದೆಲೆ ಹಿಡಿದು ಎಳೆದಾಡಿರುವುದಾಗಿ, 2 ನೇ ಆರೋಪಿ ಎದೆಗೆ ಮತ್ತು ಬೆನ್ನಿಗೆ ಹೊಡೆದಿರುವುದಾಗಿ ತಿಳಿಸಿರುತ್ತಾರೆ. ನಾನು 11.30-12.00 ಗಂಟೆಗೆ ಚಾಸಾ-1 ರವರ ಮನೆಗೆ ಹೋಗಿರುತ್ತೇನೆ. ಚಾಸಾ-1 ರವರು ಅಸ್ಪತ್ರೆಗೆ ದಾಖಲಾಗಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ</u>**

ದಿ.05.04.2021 ರಂದು ಸಂಜೆ 7.00 ಗಂಟೆಗೆ ಚಾಸಾ-1 ರವರು ಕರೆ ಮಾಡಿ

ಆರೋಪಿತರು ಮನೆಯ ಒಳಗೆ ಬಂದು, ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿ ಚಾಸಾ-1 ರವರನ್ನು ಹಿಡಿದು ಎಳೆದಾಡಿ ಕೆಳಕ್ಕೆ ಕೆಡವಿ, ತಲೆಯನ್ನು ನೆಲಕ್ಕೆ ಜಜ್ಜಿ ನೋವುಂಟು ಮಾಡಿ, 2 ನೇ ಆರೋಪಿ ಕಾಲಿನಿಂದ ಹೊಟ್ಟೆಗೆ ಒದ್ದು ನೋವುಂಟು ಮಾಡಿರುವ ವಿಚಾರ ನನಗೆ ತಿಳಿಸಿದರು ಎಂದರೆ ಸರಿ. ಚಾಸಾ-1 ರವರು ತನ್ನನ್ನು ಯಾರೋ ಮದ್ದೂರು ಅಸ್ಪತ್ರೆಗೆ ನಂತರ ಮಂಡ್ಯ ಅಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತಾರೆ ಎಂದು ನನಗೆ ತಿಳಿಸಿದರು ಎಂದರೆ ಸರಿ. ಆಗ ನಾನು ಚಾಸಾ-1 ಮತ್ತು ಆರೋಪಿತರು ಒಂದೇ ಮನೆತನದವರಾದ ಕಾರಣ ದೂರು ನೀಡುವುದು ಬೇಡ, ಮಾತನಾಡಿ ತೀರ್ಮಾನ ಮಾಡಿಕೊಳ್ಳೋಣ ಎಂದು, ಬೆಂಗಳೂರಿನಿಂದ ಬಂದು ಸಮಸ್ಯೆ ಬಗೆಹರಿಸುವುದಾಗಿ ಹೇಳಿ ದಿ.18.04.2021 ರಂದು ತೀರ್ಮಾನ ಮಾಡಲು ಪ್ರಯತ್ನಿಸಿ ಆರೋಪಿತರು ಸಹಕರಿಸದ ಕಾರಣ ಚಾಸಾ-1 ರವರಿಗೆ ದೂರು ನೀಡಲು ತಿಳಿಸಿರುತ್ತೇನೆ ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ಟಿ ಕೆ ವಕೀಲರಿಂದಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು 400/- ರೂ.ಗಳ ಖರ್ಚಿನ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ